Online Newspaper Clipping Service

ವಿಜಯವಾಣಿ

Dtd- Saturday, 16th, November- 2019

Page No.12

# ವೈದ್ಯರ ಮೇಲೆ ಹಲ್ಲೆಗೆ 10 ವರ್ಷ ಜೈಲು

ನವದೆಹಲಿ: ಕರ್ತವ್ಯ ನಿರತ ವೈದ್ಯರು ಮತ್ತು ಆರೋಗ್ಯ ಕ್ಷೇತ್ರದ ಇತರ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದವರಿಗೆ 10 ವರ್ಷದವರೆಗೆ ಜೈಲು ಶಿಕ್ಷೆ ವಿಧಿಸುವ ಕಾನೂನು ರೂಪಿಸಲು ಮುಂಬರುವ ಚಳಿಗಾಲದ ಅಧಿವೇಶನದಲ್ಲೇ ಮಸೂದೆ ಮಂಡಿಸಲಾಗುವುದು ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.



» **ಚಳಿಗಾಲದ ಅಧಿವೇಶನದಲ್ಲಿ ಮಸೂದೆ ಮಂಡನೆ**

ದೇಶದ ಹಲವು ಭಾಗಗಳಲ್ಲಿ ವೈದ್ಯರ ಮೇಲೆ ಹಲ್ಲೆ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಕಠಿಣ ಕಾನೂನು ರೂಪಿಸಬೇಕೆಂಬ ಒತ್ತಾಯ ಬಲವಾಗಿ ಕೇಳಿ ಬರುತ್ತಿದೆ. ಇತ್ತೀಚೆಗೆ ಕರ್ನಾಟಕದಲ್ಲೂ ಇಂಥ ಘಟನೆ ನಡೆದು ವೈದ್ಯರು, ಸಿಬ್ಬಂದಿ ಮುಷ್ಕರ ನಡೆಸಿದ್ದರು.

## ಪ್ರಸ್ತಾಪಿತ ಶಿಕ್ಷೆ ಪ್ರಮಾಣ

- ವೈದ್ಯರು ಹಾಗೂ ಇತರ ಸಿಬ್ಬಂದಿಗೆ ಗಂಭೀರ ಗಾಯಗೊಳಿಸಿದರೆ ಎರಡರಿಂದ ಹತ್ತು ಲಕ್ಷ ರೂಪಾಯಿವರೆಗೆ ದಂಡ. ದೈಹಿಕವಾಗಿ ಊನವಾದರೆ ಒಂದು ಲಕ್ಷದಿಂದ ಐದು ಲಕ್ಷದವರೆಗೆ ಪರಿಹಾರ ವಸೂಲಿ.
- ಕ್ಲಿನಿಕ್, ಆಸ್ಪತ್ರೆ ಮತ್ತಿತರ ವೈದ್ಯಕೀಯ ಸೇವಾ ಕಟ್ಟಡಗಳಿಗೆ ಹಾನಿ ಮಾಡಿದರೆ ಆರು ತಿಂಗಳಿಂದ ಐದು ವರ್ಷದವರೆಗೆ ಜೈಲು. 50 ಸಾವಿರದಿಂದ ಐದು ಲಕ್ಷ ರೂಪಾಯಿವರೆಗೆ ದಂಡ.
- ಪರಿಕರಗಳಿಗೆ ಹಾನಿ ಮಾಡಿದರೆ ಮಾರುಕಟ್ಟೆ ಮೌಲ್ಯದ ದುಪ್ಪಟ್ಟು ಪರಿಹಾರ ವಸೂಲಿ.